605(495) ಶ್ರೀ ರವೀಂದ್ರನಾಥ್ ಎಸ್.ಎ. (ಮಾಯಕೊಂಡ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಹಕಾರಿ ಸಕ್ಕರೆ ಕಾರ್ಖಾನೆಗಳ ಕಾರ್ಮಿಕರನ್ನು ಲೇ ಆಫ್ ಮಾಡಲು ಅನುಮತಿ ಕೊಡುವ ಅಧಿಕಾರ ಇರುವುದು ಯಾರಿಗೆ;

ಆ) ಕಬ್ಬು ಅಭಿವೃದ್ಧಿ ಆಯುಕ್ತರು ಹಾಗೂ ಸಕ್ಕರೆ ನಿರ್ದೇಶಕರಿಗೆ ಈ ಅಧಿಕಾರ ಇರದೆ ಅವರು ಲೇ-ಆಫ್‌ಗೆ ಅನುಮತಿ ಕೊಟ್ಟಿರುವುದೇ ಆದಲ್ಲಿ ಅದು ಕಾನೂನು ಬಾಹಿರವಾಗುವುದಿಲ್ಲವೆ;

ಇ) ಹೌದಾದಲ್ಲಿ ಇಂತಹ ಕಾನೂನು ಬಾಹಿರ ಅನುಮತಿ ಆದೇಶಗಳನ್ನು ಲೇ-ಆಫ್ ಮಾಡಿದ ದಿನದಿಂದಲೇ ಜಾರಿಗೆ ಬರುವಂತೆ ವಾಪಸ್ ಪಡೆಯಲಾಗುವುದೇ;

ಈ) ಹೌದಾದಲ್ಲಿ ಯಾವಾಗ ವಾಪಸ್ ಪಡೆಯಲಾಗುವುದು?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ಸಹಕಾರ ಸಕ್ಕರೆ ಕಾರ್ಖಾನೆಗಳಿಗೆ ಸಂಬಂಧಿಸಿದಂತೆ ಸಕ್ಕರೆ ನಿರ್ದೇಶಕರು.

ಆ) ಕಾರ್ಖಾನೆಯ ಒಟ್ಟಾರೆ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಹಾಗೂ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 70 ಮತ್ತು 118 ರನ್ವಯ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರವರು ಲೇ-ಆಫ್ ಆದೇಶ ಹೊರಡಿಸಿರುತ್ತಾರೆ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

606(498) ಶ್ರೀ ಎಸ್.ಎ. ರವೀಂದ್ರನಾಥ್ (ಮಾಯಕೊಂಡ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆ (ನಿ) ದೊಡ್ಡ ಬಾತಿ ಇವರು ಹಾಕಿರುವ ಎಸ್.ಎಲ್.ಪಿ. 9643/2003ನಲ್ಲಿ ದಿನಾಂಕ 26-7-2004ರ ಸಂಬಂಧದಲ್ಲಿ ಘನ ಸರ್ವೋಚ್ಚ ನ್ಯಾಯಾಲಯ ಕೊಟ್ಟಿರುವ ಮಧ್ಯಂತರ ಆದೇಶದ ಪ್ರಕಾರದ 4-5-1998ರಂದು ಸರ್ಕಾರದ ಸಮ್ಮುಖದಲ್ಲಿ ಆದಂತಹ ಒಪ್ಪಂದದಂತೆ ಪುನರ್ ನೇಮಕಗೊಂಡ ಕಾರ್ಮಿಕರಿಗೆ ಕೊಡಬೇಕಾಗಿರುವ ಶೇ. 40ರಷ್ಟು ಬಾಕಿ ವೇತನವನ್ನು ಇದುವರೆಗೂ ನೀಡದಿರಲು ಕಾರಣವೇನು;

ಆ) ಯಾವಾಗ ಈ ವೇತನ ಬಾಕಿಯನ್ನು ಪಾವತಿಸಲಾಗುವುದು?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ಗೌರವ ಕರ್ನಾಟಕ ಉಚ್ಚ ನ್ಯಾಯಾಲಯವು ರಿ.ಅ. ಸಂ. 13524/99ರಲ್ಲಿ ದಿನಾಂಕ 25-2-2003ರಲ್ಲಿ ನೀಡಿರುವ ಆದೇಶದ ವಿರುದ್ಧ ಕಾರ್ಖಾನೆಯು

ಗೌರವ ಸರ್ವೋಚ್ಚ ನ್ಯಾಯಾಲಯದಲ್ಲಿ (ಎಸ್.ಎಲ್.ಪಿ.) (ಸಿವಿಲ್) ಸಂ. 9643/2003ನ್ನು ದಾಖಲಿಸಿರುತ್ತದೆ. ಎಸ್.ಎಲ್.ಪಿ.ಯು. ದಿನಾಂಕ 26-7-2004ರಲ್ಲಿ ವಿಚಾರಣೆಗೆ ಬಂದಿದ್ದು ಗೌರವ ಸರ್ವೋಚ್ಚ ನ್ಯಾಯಾಲಯವು ಈ ಮಾಲ್ಯನವಿಯನ್ನು ದಾಖಲಿಸಿಕೊಂಡು ಸಿವಿಲ್ ಅಪೀಲ್ ಎಂಬುದಾಗಿ ಪರಿಗಣಿಸಿದೆ. ಈ ಮೇಲ್ಮನವಿಯ ಮೇಲೆ ತೀರ್ಪು ನಿರೀಕ್ಷಿಸಲಾಗುತ್ತಿದೆ.

ಆ) ಸರ್ವೋಚ್ಚ ನ್ಯಾಯಾಲಯದ ಅಂತಿಮ ಆದೇಶದ ನಂತರ ಅದರಂತೆ ಕಾರ್ಖಾನೆಯು ಕ್ರಮ ಕೈಗೊಳ್ಳಬೇಕಾಗಿರುತ್ತದೆ.

607(710) ಶ್ರೀ ಎಸ್.ಎ. ರವೀಂದ್ರನಾಥ್ (ಮಾಯಕೊಂಡ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭದ್ರಾ, ಸಹಕಾರಿ ಸಕ್ಕರೆ ಕಾರ್ಖಾನೆ ನಿ. ದೊಡ್ಡಬಾತಿ ಇದರ ಮುಖ್ಯ ಟರ್ಬೈನ್ ಹಂಗಾಮು ನಡೆಯುವಾಗ ಪದೇ ಪದೇ ದುರಸ್ಥಿಗೆ ಬರುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಪುನ: ಪುನ: ಕೆಡುತ್ತಿರುವವರ ಬಗ್ಗೆ ಸರ್ಕಾರ ತೆಗೆದುಕೊಂಡ ಹಾಗೂ ತೆಗೆದುಕೊಳ್ಳಲಿರುವ ಕ್ರಮಗಳೇನು;

ಇ) ಪದೇ ಪದೇ ದುರಸ್ತಿಗೊಳಗಾಗಲು ಕಾರಣಗಳೇನು;

ಈ) ಈ ಬಗ್ಗೆ ತನಿಖೆ ಮಾಡಲಾಗಿದೆಯೇ;

ಉ) ಕಾರ್ಖಾನೆ ಪ್ರಾರಂಭವಾದಾಗಿನಿಂದ ಇದುವರೆಗೂ ಎಷ್ಟು ಬಾರಿ ಕೆಟ್ಟಿದೆ;

ಊ) ಪ್ರತಿ ಬಾರಿಗೂ ದುರಸ್ಥಿಗೆಂದು ಖರ್ಚಾದ ಹಣ ಎಷ್ಟು (ದುರಸ್ಥಿ ಬಿಲ್‌ಗಳ ದೃಢೀಕೃತ ಪ್ರತಿ ಒದಗಿಸುವುದು);

ಋ) ಈ ರೀತಿ ಕೆಡುವುದರಿಂದ ಇದುವರೆಗೂ ಕಾರ್ಖಾನೆಗೆ ನಷ್ಟ ಉಂಟಾಗಿರುವುದೆಷ್ಟು;

ಋೂ) ಇದಕ್ಕೆ ಯಾರನ್ನು ಹೊಣೆಗಾರರನ್ನಾಗಿ ಮಾಡಲಾಗಿದೆ;

ಎ) ಅಂತಹವರುಗಳ ಮೇಲೆ ಕೈಗೊಂಡಿರುವ ಕ್ರಮಗಳೇನು (ವಿವರ ನೀಡುವುದು)?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು)

ಅ) ಹೌದು.

ಆ) ಕಾರ್ಖಾನೆಯ ಹಳೆಯ ಟರ್ಬೈನ್‌ನ್ನು ಬದಲಾಯಿಸಿ ಹೊಸ ಟರ್ಬೈನ್ ಅಳವಡಿಸಲು ಸರ್ಕಾರವು ಪತ್ರಕ್ರ ಸಮಾಸು 030 ಸಸಕಾ 2002, ದಿನಾಂಕ 29-8-2002 ಪತ್ರದನ್ವಯ ಅನುಮತಿ ನೀಡಿತ್ತು. ಆದರೆ ಕಾರ್ಖಾನೆಯು ಕ್ಲಿಷ್ಟಕರ ಆರ್ಥಿಕ ಪರಿಸ್ಥಿತಿಯಿಂದಾಗಿ ಹೊಸ ಟರ್ಬೈಸ್ ಅಳವಡಿಸಿರುವುದಿಲ್ಲ. ಕಾರ್ಖಾನೆಯು ಹೊಸ ಟರ್ಬೈಸ್ ಅಳವಡಿಸಿಕೊಳ್ಳುವಲ್ಲಿ ವಿಫಲವಾಗಿದ್ದರಿಂದ